Mr. SPEAKER.—Question No. 256. The Hon'ble Member is not in his seat. If the Hon'ble Members come and tell me before I come to the House, it would facilitate matters. I could have given more time in regard to the other questions if I had known before that same questions would not be put.

Question No. 262. Hon'ble Member not in his seat.

Question No. 55. Again, the Hon'ble Member not in his seat.

Question No. 68, from the Fifth List.

Granting of Licence for starting Huller Mills in Tumkur Taluk.

*Q.—68. **Sri K. LAKKAPPA** (Hebbur).—

Will the Government be pleased to state.—

(*a*) the number of villages in Tumkur Taluk wherein they have granted licence to start Huller Mills for the last three years;

(*b*) whether licence has to be obtained from the Central Government to start these Huller Mills;

(*c*) the number of applications received by them in Tumkur Taluk requesting for grant of licence to start Huller Mills and the dates on which they were received during the above period;

(*d*) the rules and regulations to be followed to start a Huller Mill?

A.—**Sri M. V. KRISHNAPPA** (Minister for Revenue).—

(*a*) Nil.

(*b*) No.

(*c*) Nil.

(*d*) *Vide* sections 5 and 6 of the Rice Milling Industry (Regulation) Act, 1958 (21 of 1958) and Rules 3 and 4 of the Rice Milling Industry (Regulation and Licensing) Rules, 1959 and Central Government's Order No. G. S. R. 512, dated 22nd April 1959—Extracts placed on the Table of the House.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಿಂದ ಲೈಸೆನ್ಸಿಗಾಗಿ ಅರ್ಜಿ ಬಂದಿಲ್ಲವೆಂದು ಹೇಳಿದ್ದೀರಿ, ಹಾಗಿದ್ದರೆ ಒಂದು ಅರ್ಜಿಯೂ ಬಂದಿಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಲೈಸೆನ್ಸಿಗಾಗಿ ಒಂದು ಅರ್ಜಿಯೂ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಹಲ್ಲರ್ ಮಿಲ್ ಪ್ರಾರಂಭ ಮಾಡಬೇಕೆಂದು ಎಷ್ಟು ಅರ್ಜಿಗಳು ಬಂದಿವೆ?

ಶ್ರೀ ಎಂ. ವಿ. ಕೃಷ್ಣಪ್ಪ.—1958ನೆಯ ಇನಮಿಯು ರೆಗ್ಯುಲೇಷನ್ ಪ್ರಕಾರ ಪರ್ಮಿಟ್ ಮತ್ತು ಲೈಸೆನ್ಸ್ ಎರಡನ್ನೂ ತೆಗೆದುಕೊಳ್ಳಬೇಕು. ಪರ್ಮಿಟ್ಟನ್ನು ಸರ್ಕಾರದಿಂದ ತೆಗೆದುಕೊಳ್ಳಬೇಕು; ಪರ್ಮಿಟ್ ಕೊಟ್ಟಮೇಲೆ 'ಹಲ್ಲಿಂಗ್' ಪ್ರಾರಂಭ ಮಾಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಬರೆದುಕೊಳ್ಳಬೇಕು. ಲೈಸೆನ್ಸ್ ಕೊಡುವವರು ಹಲ್ ಮಾಡುವುದಕ್ಕೆ ಅವರು. ಈ ಲೈಸೆನ್ಸಿಗೆ ಯಾರೂ ಅರ್ಜಿಕೊಟ್ಟಿಲ್ಲವೆಂದು ಉತ್ತರ ಕೊಟ್ಟಿದ್ದೇನೆ. ತಮ್ಮ ಪ್ರಶ್ನೆಯಲ್ಲಿ ತುಮಕೂರು ತಾಲ್ಲೂಕಿನಲ್ಲಿ ಯಾರಾದರೂ ಲೈಸೆನ್ಸ್ ಕೇಳಿದ್ದಾರೆಯೆ ಎಂದಿದೆ. Under Section 5, permit is issued by the Government and under Section 6 licence is issued by the Deputy Commissioner. ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪರ್ಮಿಟ್‌ಗೆ ಎಷ್ಟು ಅರ್ಜಿಗಳು ಬಂದಿವೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮೂರು ವರ್ಷಗಳಲ್ಲಿ ಹತ್ತು ಅರ್ಜಿಗಳು ಬಂದಿದ್ದವು. ಅದರಲ್ಲಿ ಮೂರಕ್ಕೆ ಕೊಟ್ಟಿದೆ, ಇನ್ನು ಏಳು ಅರ್ಜಿಗಳು ಬೇರೆ ಬೇರೆ ಘಟ್ಟಗಳಲ್ಲಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಕೆಲವು ಅರ್ಜಿಗಳು ತಕ್ಷಣ ವಿಲೇ ಆಗುವುದಕ್ಕೂ ಮತ್ತೆ ಕೆಲವು ತಡವಾಗುವುದಕ್ಕೂ ಸರ್ಕಾರದಲ್ಲಿ ಅಂಥ ಹೆಚ್ಚುವರಿ ಒತ್ತಡವೇನಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅರ್ಜಿದಾರರು ಬೇರೆ ಬೇರೆ ಸ್ಥಳಗಳಲ್ಲಿರುತ್ತಾರೆ. ಅಲ್ಲದೆ ಕೆಸರುಮಾಡು ಎಂಬ ಒಂದು ಹಳ್ಳಿಯಲ್ಲಿ ಈಗಾಗಲೇ ಒಂದು ಮಿಲ್ ಇದೆ. ಇನ್ನೊಂದಕ್ಕೆ ಹಾಕಿದ್ದಾರೆ. ಇಂಥ ಚಿಕ್ಕ ಸ್ಥಳದಲ್ಲಿ ಎರಡಕ್ಕೆ ಅವಕಾಶ ಕೊಡುವುದು ಹೇಗೆ ಎಂದು ಯೋಚನೆಮಾಡಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಕೆಸರಮಾಡದಲ್ಲಿ ಒಂದು ಇದೆಯೆಂದು ಹೇಳಿದಿರಿ, ಏನೋ ಬಡವ ಹಿಂದೆ ತೆಗೆದು ಕೊಂಡಿದ್ದಾನೆ; ಈಗ ಅನೇಕ ಸಾರಿ ಇದಕ್ಕಾಗಿ ತಿರುಗುತ್ತಿದ್ದಾನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಬಡವ ತಿಳಿಯದೆ ಹೊಂದಿದ್ದಾನೆ ಎಂದರೆ ಅದು ತಪ್ಪು. ಲೈಸೆನ್ಸ್ ಇಲ್ಲದೆ ಮಿಲ್ ಹಾಕುವುದು ತಪ್ಪು. That is an offence which cannot be so easily ignored.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗಲಾದರೂ ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—Personal inspection ಮಾಡ ಬೇಕೆಂದು ಬರೆದಿದ್ದೇನೆ. ಆಲೂರು ನನ್ನ ಕ್ಷೇತ್ರದ ಹತ್ತಿರ ಇದೆ. ಅಲ್ಲದೆ ಅಲ್ಲಿ ಒಂದು ಮಿಲ್ ಇದೆ, ಇನ್ನೊಂದಕ್ಕೆ ಅವಕಾಶ ಕೊಡಬಾರದೆಂದು ಹೇಳಿ ಕೆಲವರು ಅರ್ಜಿಕೊಟ್ಟು ಗಲಾಟೆ ಮಾಡುತ್ತಿದ್ದಾರೆ. ಆದಕಾರಣ ಯಾರಿಗಾದರೂ ತೊಂದರೆಯಾಗ ತ್ತದೆಯೇ ಇಲ್ಲವೆ ಎಂದು ನೋಡಬೇಕೆಂದು ಇಟ್ಟುಕೊಂಡಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಪರ್ಮಿಟ್ ಕೊಡುವುದನ್ನು ತೀರ್ಮಾನ ಮಾಡುವುದು ರೆವಿನ್ಯೂ ಇನ್ಸ್‌ಪೆಕ್ಟರು, ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರ ವರದಿಯ ಆಧಾರದ ಮೇಲ್ಲಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ರೂಲ್ಸ್ ಇವೆ.

ಶ್ರೀ ಕೆ. ಲಕ್ಕಪ್ಪ.—ಕೆಸರುಮಾಡದ ಬಗ್ಗೆ ವರದಿ ಬಂದಿದೆಯೆ? ಇದ್ದರೆ ಏನು ಬರೆದಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನ ಗಮನಕ್ಕೆ ಬಂದಿರುವ ಪ್ರಕಾರ, ಮೊದಲು ಡೆಪ್ಯುಟಿ ಕಮೀಷನರು ಮೊದಲು ಕೊಡಬಾರದೆಂದು ತಿಳಿಸಿದರು, ಆಮೇಲೆ ಕೊಡಬಹುದೆಂದು ಹೇಳಿದರು. ಅಮಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರು ಬೇರೆ ಬೇರೆ ಅಭಿಪ್ರಾಯ ಕೊಟ್ಟಿದ್ದಾರೆ, ಅದರಿಂದ ಸರ್ಕಾರ ತೀರ್ಮಾನಕ್ಕೆ ಬೇಗ ಬರಲು ತೊಂದರೆ. ಎಲ್ಲರ ಅಭಿಪ್ರಾಯವೂ ಒಂದೇರೀತಿ ಇದ್ದರೆ ಸುಲಭ. ಅಲ್ಲದೆ ಇಲ್ಲಿ ಬೇರೆಯವರಿಂದ ವಿರೋಧ ಬಂದಿರುವುದರಿಂದ, ಪರೀಕ್ಷೆ ಮಾಡಿ ತೀರ್ಮಾನ ಕೊಡಬೇಕಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ರೈಸ್‌ಮಿಲ್ ಪ್ರಾರಂಭಮಾಡುವುದಕ್ಕೆ ಪರ್ಮಿಟ್ ತೆಗೆದುಕೊಳ್ಳಬೇಕೆಂದು ಹೇಳುವ ಉದ್ದೇಶವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—1958ನೆಯ ಇನವಿಯ Rice Mill Act ಇದೆ; ಅದರ ಪ್ರಕಾರ regulate ಮಾಡಬೇಕು ರಾಜ್ಯ ಸರ್ಕಾರದವರು. Hand pound rice ಕೈಗಾರಿಕೆ ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಲಾಗಿದೆ. ಎರಡನೆಯದಾಗಿ ರೈಸ್‌ಮಿಲ್ ನಡೆಸಲು ಲೈಸೆನ್ಸ್ ಪಡೆಯಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇನ್ನೊಂದು ಮಿಲ್ಲಿಗೆ ತೊಂದರೆಯಾಗುತ್ತದೆ ಎಂಬುದಕ್ಕಿಂತ hand pound rice ಅಭಿವೃದ್ಧಿಮಾಡಬೇಕೆಂದಲ್ಲವೆ ಉದ್ದೇಶ.

ಶ್ರೀ ಎಂ. ವಿ. ಕೃಷ್ಣಪ್ಪ.—ಮುಖ್ಯವಾಗಿ ಒಂದು ಕಡೆ ಹೆಚ್ಚು ರೈಸ್ ಮಿಲ್‌ಕೊಡಬಾರದೆಂಬುದು ಒಂದು; ಎರಡನೆಯದು hand pound rice ಕೈಗಾರಿಕೆಗೆ ತೊಂದರೆಯಾಗಬಾರದು. ಒಂದು ಸಣ್ಣಗ್ರಾಮದಲ್ಲಿ ಎರಡಕ್ಕೆ ಅವಕಾಶ ಕೊಟ್ಟರೆ ಇಬ್ಬರಿಗೂ ತೊಂದರೆಯಾಗಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾವ ಜೇರೆ ಉದ್ಯಮಕ್ಕೂ ಈ ರೀತಿಯ restriction ಇಲ್ಲದೇ ಯಿರುವಾಗ ರೈಸ್ ಮಿಲ್‌ಗೆ ಮಾತ್ರ ಏಕೆ ?

ಶ್ರೀ ಎಂ. ವಿ. ಕೃಷ್ಣಪ್ಪ.—Hand pound rice ಕೈಗಾರಿಕೆ ಅಭಿವೃದ್ಧಿಯಾಗಬೇಕೆಂದು ಕೇಂದ್ರ ಸರ್ಕಾರದಲ್ಲಿ ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ಸಾಧ್ಯವಾದ ಮಟ್ಟಿಗೂ ಪೂರ್ತಿಯಾಗಿ ಹೊಸಮಿಲ್‌ಗಳಿಗೆ ಅವಕಾಶ ಕೊಡುವುದನ್ನು ನಿಲ್ಲಿಸಿ ಎಂದು ಹೇಳಿದರು. ಆದರೆ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಕೆಲವಕ್ಕಾದರೂ ಅವಕಾಶ ಕೊಡಬೇಕೆಂದು ಅಲ್ಲಲ್ಲಿ ಕೆಲವನ್ನು ಕೊಡುತ್ತಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅಮಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರು ಇವರ ಅಭಿಪ್ರಾಯ ಭಿನ್ನ ಭಿನ್ನವಾಗಿರುವುದರಿಂದ ಕಷ್ಟವಾಗುತ್ತದೆ ಎಂದು ಹೇಳಿದರು ಹೀಗೆ ಒಂದೇ ಸ್ಥಳದಲ್ಲಿರುವ ಅಧಿಕಾರಿಗಳು ಬೇರೆಬೇರೆ ಅಭಿಪ್ರಾಯ ಕೊಡುವುದರ ಬಗ್ಗೆ ಸರ್ಕಾರ ಏನಾದರೂ ಗುಪ್ತವಾದ ತನಿಖೆ ನಡೆಸಿದ್ದಾರೆಯೆ ; ಯಾವ ಕಾರಣದಿಂದ ಹಾಗೆ ಬೇರೆ ಬೇರೆ ಅಭಿಪ್ರಾಯ ಹೇಳಿದ್ದಾರೆಂದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾರಣವೇನೂ ಇಲ್ಲ, ರೆವಿನ್ಯೂ ಇನ್‌ಸ್ಪೆಕ್ಟರು ಸ್ಥಳದಲ್ಲರುತ್ತಾರೆ. ಸ್ಥಳದ ವಿದ್ಯಮಾನ ನೋಡಿ ಬರೆಯುತ್ತಾರೆ, ಅಮಲ್ದಾರರು ವರದಿ ನೋಡಿ ಬರೆಯುತ್ತಾರೆ, ಡೆಪ್ಯುಟಿ ಕಮೀಷನರೂ ಹೀಗೆ. ಇದರಲ್ಲಿ ದುರುದ್ದೇಶವಿದೆ ಎಂದು ಹೇಳುವುದು ತಪ್ಪು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಒಂದು ಗ್ರಾಮದಲ್ಲಿ ಎರಡಕ್ಕೆ ಅವಕಾಶಕೊಟ್ಟರೆ ಅವರಿಗೆ ತೊಂದರೆಯಾಗುತ್ತದೆಂದು ಹೇಳಿದಿರಿ, ಹೆಚ್ಚು ಜನರಿಗೆ ಮಿಲ್‌ನಡೆಸುವ ಅವಕಾಶ ಕೊಟ್ಟರೆ ಸ್ಪರ್ಧೆಹುಟ್ಟಿ, ಅದರಿಂದ ಜನರಿಗೆ ಅನುಕೂಲವಾಗುತ್ತದೆಂಬುದು ಗೊತ್ತಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೈಸ್ ಮಿಲ್ ಕೈಗಾರಿಕೆಯನ್ನು ಹತೋಟಿ ಮಾಡಬೇಕು, ಬ್ಯಾಲೆನ್ಸ್ ಮಾಡಬೇಕು ಎಂದು ಇಂಡಿಯಾ ಸರ್ಕಾರದವರು ಬರೆದಿದ್ದರು ಅದರಲ್ಲಿಯೂ ಹಲ್ಲರ್‌ಗೆ ಕೊಡಲೇಬೇಡಿ ಷೆಲ್ಲರ್‌ಚೈಪ್‌ಗೆ ಕೊಡಬಹುದು ಎಂದು ಸೂಚಿಸಿದ್ದರು. ಏಕೆಂದರೆ, ಹಲ್ಲರ್‌ನಲ್ಲಿ ಪುಷ್ಕಳವಾದ ತಿಡ್ಡನ್ನು ಪೂರ್ಣವಾಗಿ ನಾಶಮಾಡುತ್ತದೆ. ಇದರಿಂದ ಮನುಷ್ಯನಿಗೆ ಶಕ್ತಿ ಕೊಡುವ ಭಾಗವೇ ಹೋಗುತ್ತದೆ.

ಶ್ರೀ ಡಿ. ಪರಮೇಶ್ವರಪ್ಪ.—Hand pounded rice ಕೈಗಾರಿಕೆಯನ್ನು ಅಭಿವೃದ್ಧಿಮಾಡಲು ತಾವೇ ನಾದರೂ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ, ಹೇಗಾದರೂ ಉತ್ತೇಜನ ಕೊಟ್ಟಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—Small-scale Industries ನಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಜೈಲುಗಳು, ಮತ್ತು ಆಸ್ಪತ್ರೆಗಳಲ್ಲಿ hand pounded rice ಕೊಂಡುಕೊಳ್ಳಬೇಕೆಂದು ಮಾಡಿ ಇಂಡಿಯಾ ಸರ್ಕಾರದವರೂ ಬಹಳ ಪ್ರೋತ್ಸಾಹ ಕೊಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಿಲ್ಲುಗಳಲ್ಲಿ ಸ್ವಲ್ಪ ಪಾಲಿಷ್‌ಮಾಡಿ ಕೈಲಕುಟ್ಟಿದ ಅಕ್ಕಿ ಎಂದು ಮಾರುತ್ತಿದ್ದಾರೆ. ತಮ್ಮ ಮತ್ತು ಶೀರ್ಮಾ ಲಕ್ಕಪ್ಪನವರದು ಒಂದೇ ಕ್ಷೇತ್ರವಾದುದರಿಂದ ಆ ರೀತಿ ಆಗುತ್ತಿದೆಯೆಂದು ಪದಂತಿ ಇದೆ, ಇದು ನಿಜವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರ ಕ್ಷೇತ್ರ ಮತ್ತು ನನ್ನ ಕ್ಷೇತ್ರ ಒಂದೇ ಆದರೂ, ನನ್ನ ಕ್ಷೇತ್ರ ದೊಡ್ಡದು ಎಲ್ಲಕಡೆಯೂ ಆರೀತಿ ನಡೆಯುತ್ತಿದೆಯೆಂದು ಮನಸ್ಸಿನಲ್ಲಿಟ್ಟುಕೊಂಡು ಮಾಡಿದರೆ ಧರ್ಮವಲ್ಲ. ಸ್ಥಳದಲ್ಲರುವವರೂ ನೋಡಿ ಹಾಗೇನಾದರೂ ನಡೆದರೆ ಅದನ್ನು ತಡೆಗಟ್ಟುವ ಪ್ರಯತ್ನ ಮಾಡಬೇಕು.

ಶ್ರೀ ಕೆ. ಲಕ್ಕಪ್ಪ.—ಎಷ್ಟು ಬೇಗ ಸ್ಥಳ ಪರಿಶೀಲನೆ ಮಾಡಿ ಪರ್ಮಿಟ್ ಕೊಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಹೋದ ತಿಂಗಳೇ ಹೋಗ ಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೆ, ಆದರೆ ಆಗಲಲ್ಲ. ಆದಷ್ಟು ಬೇಗ ನೋಡುತ್ತೇನೆ.

ಶ್ರೀ ಸಂಜೀವನಾಥ್ ಐಕಳ.—ಸೆಂಟ್ರಲ್ ರೈಸ್ ಮಿಲ್ಲುಗಳಿಗೆ ಲೈಸೆನ್ಸ್‌ಗೆ ಪರ್ಮಿಷ್ಷನ್ ಕೊಡಬಾರದು. ಹೆಚ್ಚಿಗೆ ಕೊಟ್ಟಣದ ಅಕ್ಕಿಯನ್ನೇ ಉಪಯೋಗಿಸಬೇಕೆಂದು ಕ್ಲಿಯರಾಗಿ ಸೂಚನೆ ಇರುವಾಗ ಮತ್ತೆ ಮತ್ತೆ ಹೆಚ್ಚಿಗೆ ರೈಸ್ ಮಿಲ್ಲುಗಳಿಗೆ ಲೈಸೆನ್ಸ್‌ಗೆ ಪರ್ಮಿಷ್ಷನ್ ಕೊಡುವುದರಿಂದ ಕೊಟ್ಟಣದ ಅಕ್ಕಿ ತಯಾರಿಕೆಯ ಉದ್ಯಮಕ್ಕೆ ತುಂಬಾತೊಂದರೆ ಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಕ್ಟ್‌ನಲ್ಲಿ ಆ ರೀತಿ ಕೊಡಬಾರದು ಎಂದೇನಿಲ್ಲ. ರಿಪೋರ್ಟ್‌ನಲ್ಲಿತ್ತು. ಕೇಂದ್ರ ಸರ್ಕಾರದವರು ಸೆಂಟ್ರಲ್ ರೈಸ್ ಮಿಲ್ಲಿನ ಎಕ್ಸ್‌ಪೈರಿ ಕಮಿಟಿಯವರಿಗೆ ತಕ್ಷಣ ಈ ಬಗ್ಗೆ ಒಂದು ವರದಿಮಾಡಿ ಆ ವರದಿಯ ಅನುಸಾರವಾಗಿ ಆಕ್ಟ್ ತಯಾರು ಮಾಡಬೇಕಾಗಿದೆ. ಈಗಿನ ಆಕ್ಟಿನಲ್ಲಿ ಆ ರೀತಿ ಇಲ್ಲ. ರೆಗ್ಯುಲೇಷನ್ಸ್ ಮಾಡಬೇಕೆಂದು ಇದೆ.

Sri SANJEEVANATH AIKALA.–The provisions of the said Act clearly envisage that no milling should be permitted wherever the hand-pounding co-operative societies come forward to take up this work in South Kanara District. How many co-operative societies were formed to undertake hand-pounding?

ಶ್ರೀ ಎಂ. ವಿ. ಕೃಷ್ಣಪ್ಪ.—ಸಕಾತ್ ಕೆನರಾದಲ್ಲಿ ಈಗ ಕೊಡುತ್ತಾ ಇಲ್ಲ ಬಹಳ ರೇರ್ ಕೇಸಸ್. ಎಲ್ಲ ಹ್ಯಾಂಡ್ ಪೌಂಡಿಗ್ ಪವರ್ ಮಿಲ್ಲುಗಳು ಇರುವದಿಲ್ಲವೋ ಅಲ್ಲಗೆ ಮಾತ್ರ ಲೈಸೆನ್ಸ್ ಪರ್ಮಿಟ್ ಕೊಡುತ್ತೇವೆ. ಅಲ್ಲಗೆ in the course of three or four years for a big district like South Kanara where rice is the staple food, 14 hullers is little compared to the growing population. Handpounding is an old industry in South Kanara and paddy used to be dehusked in individual houses.

Sri SANJEEVANATH AIKALA.—There is absolutely no necessity for giving extra permission.

Mr. SPEAKER.—It is either giving information or something addressed to me.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಇತ್ತೀಚೆಗೆ ಹ್ಯಾಂಡ್ ಪೌಂಡಿಂಗ್ ರೈಸನ್ನು ಯಾರೂ ಮಾಡಿ ಕೊಡುತ್ತಾ ಇಲ್ಲ. ಮುಸ್ತ ಬತ್ತವನ್ನು ಯಾರೂ ಕಟ್ಟುವುದಿಲ್ಲ ಬೇಡುದು ಎಲ್ಲರಿಗೂ ಗೊತ್ತಿರುವಾಗ, ಮುಂದೆ ರೈಸ್ ಮಿಲ್ಲಗೆ ಲೈಸೆನ್ ಪರ್ಮಿಷ್ಕೊಡುವಾಗ ಸರ್ಕಾರದವರು ಸ್ವಲ್ಪ ಲಿಬರಲ್ ಆಗಿದ್ದರೆ ಅನೇಕರಿಗೆ ಈಗ ಆಗುತ್ತಿರುವ ತೊಂದರೆ ತಪ್ಪುತ್ತದೆ ಅಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.— ಸರ್ಕಾರದವರು ಈ ವಿಷಯದಲ್ಲಿ ಸ್ವಲ್ಪ ಲಿಬರಲ್ಲಾಗಿರಬೇಕೆಂದೇ ಈಗ ಒಂದು ಮಧ್ಯ ಮಾರ್ಗದಲ್ಲಿ ಹೋಗುತ್ತಿರುವುದು.

ಶ್ರೀ ಎಸ್. ಎಂ. ಕೃಷ್ಣ.—ಈಗಿನ ತುರ್ತು ಪರಿಸ್ಥಿತಿಯ ದೆಸೆಯಿಂದಾದರೂ ಕೂಡ ಈ ಸಭೆಗೆ ಸಂಬಂಧಪಟ್ಟ ಕಾಗದಗಳು ಬೇಗ ಮೂವ್ ಆಗುವುದು ಎಂಬುದಾಗಿ ಭರವಸೆಯನ್ನು ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತುರ್ತು ಪರಿಸ್ಥಿತಿ ಈ ಅಧಿವೇಶನದವರೆಗೂ ಬಂದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ;—ರೈಸ್ ಮಿಲ್ಲನಲ್ಲಿ ಅಕ್ಕಿಯನ್ನು ಪೂರ್ತಿ ಪಾಲಿಷ್ ಮಾಡಿಕೊಡುವುದಕ್ಕೆ ಬದಲಾಗಿ ಕಡಮೆ ಪಾಲಿಷ್ ಮಾಡುವಂತೆ ಸೂಚನೆ ಕೊಡುವುದರಿಂದ ಕೊಟ್ಟಣದ ಅಕ್ಕಿಯನ್ನು ಉಪಯೋಗಿಸುವವರಿಗಿಂತ ಹೆಚ್ಚಿನ ಪ್ರಯೋಜನವಾಗುತ್ತದಲ್ಲವೇ?

Sri M. V. KRISHNAPPA.—Mr. Munshi when he was the Food Minister at the Centre said that we would be self-sufficient in food. He issued an order asking mills to reduce the polish by 4 per cent, but that was never followed. Never could India stop imports, and we had to relax that order.

An HON'BLE MEMBER.—Sir, I refer to Rule 42 (3) which says:

> "After all the questions have been called, the Speaker may, if time permits, call again any question which has not been asked by reason of the absence of the member in whose name it stands."

In view of this sub-rule, I request the Chair to again call the questions of Sri Anna Rao.

Mr. SPEAKER.—That has been done. I called his questions twice and the Hon'ble Member was absent on both the occasions.

Sri S. SHIVAPPA.—The short notice questions have not been answered.

Mr. SPEAKER.—I will look into them. Question time is over.

QUESTIONS FOR ANSWERS ON THE DAY

(but not taken up)

Improvements made in the Depressed Class Colony started near Ganjalagunte (Gandhinagar) in Hiriyur Taluk.

*Q.—55. Sri V. MASIYAPPA (Hiriyur).—

Will the Government be pleased to state:—

(*a*) whether a Depressed Class Colony is started near Ga jalagunte (Gandhi Nagar) in Hiriyur Taluk;

(*b*) the progress made in the Colony in the matter of improving the standard of life of the colonists;

(*c*) whether any estimate is prepared to construct an irrigation tank to the halla near that colony;

(*d*) whether the estimate is sanctioned?